# ವೈಟ್ ಸ್ಪೈಡರ್ ಲಿಲ್ಲಿ

ದಾವಣಗೆರೆ ಆಂಜನೇಯ ಬಡಾವಣೆಯ ವಾಚನಾಲಯದ ಪಕ್ಕ ಇರುವ ಬಸವೇಶ್ವರ ಪಾರ್ಕಿನಲ್ಲಿ ಸುತ್ತಿಬರಲೆಂದು ಹೋಗುತ್ತಿದ್ದಂತೆ ವಿಶಿಷ್ಟ, ನಕ್ಷತ್ರಾಕಾರದಲ್ಲಿ ಅರಳಿದ ಬಿಳಿ ಹೂವುಗಳು ಹಸುರು ಎಲೆಗಳ ನಡುವೆ ನನ್ನ ಗಮನಸೆಳೆಯಿತು. ಇದರ ಹೆಸರು 'ವೈಟ್ ಸ್ಪೈಡರ್ ಲಿಲ್ಲಿ' ಎಂದು ಪಾರ್ಕ್ ಮೇಲ್ವಿಚಾರಕ ತಿಳಿಸಿದ. ಸ್ಪೈಡರ್ ಲಿಲ್ಲಿ ಎಂಬ ಹೆಸರು ಈ ಸಸ್ಯಕ್ಕೆ ಹೇಗೆ ಬಂತೆಂಬುದಕ್ಕೆ ಜೇಡಗಳಂತೆ ಕಾಲುಗಳನ್ನು ಹೋಲುವ ಉದ್ದವಾದ, ತೆಳ್ಳಗಿನ ದಳಗಳು ಇರುವುದರಿಂದ ಬಂದಿರಬಹುದು.



'ಹೈಮೆನೊಕ್ಯಾಲಿಸ್ ಡೆಕ್ಲಿನಾಟಾ' ಎಂಬುದು ಒಂದು ನಿರ್ದಿಷ್ಟ ರೀತಿಯ ಜೇಡ ಲಿಲ್ಲಿಯನ್ನು ಸೂಚಿಸುವ ಸಸ್ಯಶಾಸ್ತ್ರೀಯ ಹೆಸರು. ಕೆಂಪು ಜೇಡ ಲಿಲ್ಲಿಗಿಂತ ಭಿನ್ನವಾಗಿರುವ 'ಬಿಳಿ ಜೇಡ ಲಿಲ್ಲಿ' ಹೆಚ್ಚು ಆಶಾವಾದಿ ದೃಷ್ಟಿಕೋನವನ್ನು ಸೂಚಿಸುತ್ತದೆ. ಆಲಂಕಾರಿಕ ಸಸ್ಯಗಳ ಸಾಲಿಗೆ ಸೇರುವ 'ಬಿಳಿ ಜೇಡ ಲಿಲ್ಲಿ', ಪೂರ್ಣ ಸೂರ್ಯನ ಬೆಳಕಿಗಿಂತ, ಭಾಗಶಃ ನೆರಳಿನಲ್ಲಿ ಬೆಳೆಯುತ್ತದೆ. ಈ ಸಸ್ಯ ಜುಲೈ ಮತ್ತು ಆಗಸ್ಟ್ ಆರಂಭದಲ್ಲಿ ಅತ್ಯುತ್ತಮವಾಗಿ ರಸ್ತೆಗಳ ಬದಿಗಳಲ್ಲಿ, ಕರಾವಳಿ ತೀರಗಳಲ್ಲಿ ಹೆಚ್ಚಾಗಿ ಬೆಳೆಯುವುದನ್ನು ಕಾಣಬಹುದು.

ಹೂವಿನ ಮಧ್ಯದಲ್ಲಿ ಕೇಸರಗಳಿದ್ದು, ನೋಡುಗರ ಗಮನ ಸೆಳೆಯುತ್ತದೆ. ಈ ಹೂವುಗಳು ಕಡಿಮೆ ಜೀವಿತಾವಧಿಯನ್ನು ಹೊಂದಿರುತ್ತವೆ. ಅರಳುವ ಹೂವಿನಲ್ಲಿ ಕೆಲವೇ ದಿನಗಳಲ್ಲಿ ಪರಾಗಸ್ಪರ್ಶ ಸಂಭವಿಸುತ್ತದೆ. ದಳಗಳು ತಮ್ಮ ಉದ್ದೇಶವನ್ನು ಪೂರೈಸಿದ ನಂತರ ಒಣಗಿ ಸಾಯಲು ಪ್ರಾರಂಭಿಸುತ್ತವೆ. ಹೂಬಿಡುವ ಅವಧಿಯು ನಾಲ್ಕರಿಂದ ಐದು ವಾರಗಳವರೆಗೆ ಇರುವ ಹೂವುಗಳ ಸರಣಿಯಲ್ಲಿ, ಒಂದೊಂದಾಗಿ ವೃತ್ತಾಕಾರದಲ್ಲಿ ಅರಳಿದ ಹೂವು ನೋಡಲು ಸುಂದರವಾಗಿರುತ್ತದೆ.

**–ಅನುರಾಧ ಟಿ., ದಾವಣಗೆರೆ**





# 50 ವರ್ಷಗಳ ಹಳೆಯ ಅಳಗುಳಿಮಣೆ

ಚಿತ್ರದಲ್ಲಿ ಕಾಣುತ್ತಿರುವ ಅಳಗುಳಿಮಣೆ ಸುಮಾರು 50–55 ವರುಷಗಳಷ್ಟು ಹಳೆಯದು. ಇದು ನಾವು ಚಿಕ್ಕವರಾಗಿದ್ದಾಗ ಆಡುತ್ತಿದ್ದದ್ದು. ಒಬ್ಬ ಬಡಗಿಗೆ ಹೇಳಿ ನಮ್ಮ ತಂದೆಯವರು ಇದನ್ನು ತೇಗ (ಸಾಗುವಾನಿ) ಮರದಿಂದ ಮಾಡಿಸಿದ್ದರು. ಶಾಲೆಯ ಪರೀಕ್ಷೆಗಳೆಲ್ಲ ಮುಗಿದು ಬೇಸಿಗೆ ಬಂತೆಂದರೆ ನಮಗೆಲ್ಲ ಖುಷಿ. ಆಗ ಹುಣಸೇ ಹಣ್ಣು ಬಿಡುವ ಕಾಲ, ಹಾಗಾಗಿ ಅದರ ಬೀಜಗಳನ್ನೇ ಬಳಸಿ ಅಳಗುಳಿಮಣೆ ಆಟ ಆಡುತ್ತಿದ್ದೆವು. ಸಣ್ಣ ಸಣ್ಣ ಕವಡೆಗಳನ್ನು ಬಳಸಿ ಆಡುತ್ತಾರೆ. ಹೊರಗೆ ಬಿರು ಬಿಸಿಲು ಇರುತ್ತಿತ್ತು, ಹಾಗಾಗಿ ಮನೆಯ ಒಳಗೆ ಕೂತು ಅಕ್ಕಪಕ್ಕದ ಮನೆಯ ಮಕ್ಕಳೆಲ್ಲ ಸೇರಿ ಇದನ್ನು ಆಡುತ್ತಿದ್ದೆವು. ಇತ್ತೀಚೆಗೆ ಕರೋನ ಸಮಯದಲ್ಲಿ ಲಾಕ್ ಡೌನ್ ಆದಾಗ ಮನೆಯಲ್ಲೇ ಕುಳಿತು ನಮ್ಮ ಮಕ್ಕಳು ಹಾಗೂ ವಯಸ್ಸಾದ ಅತ್ತೆಯ ಜೊತೆ ಈ ಮಣೆಯಲ್ಲೇ ಮತ್ತೆ ಆಟ ಆಡುತ್ತಿದ್ದೆವು. ಚೆಂದದ ಹಳೆಯ ನೆನಪುಗಳು.

**–ಜಯಂತಿ ಶಾಸ್ತ್ರಿ, ಮೈಸೂರು**

# ಮಳೆ ಅತಿಥಿ ಎಮ್ಮೆ ಚೇರಟೆ

ಮಳೆಗಾಲ ಬಂತೆಂದರೆ ಎಲ್ಲಾ ಜೀವಿಗಳಿಗೂ ಜೀವ ಬಂದಂತೆ. ಕೆಲವು ವಿಶಿಷ್ಟ ಕ್ರಿಮಿಕೀಟಗಳಂತೂ ಮಳೆ ಬಂದ ಮೇಲೆ ಹುಟ್ಟಿ, ನಂತರ ತನ್ನಿಂತಾನೆ ಮಾಯವಾಗಿ ಬಿಡುತ್ತವೆ. ಮಳೆ ಹೆಚ್ಚಿರುವ ಕರಾವಳಿ, ಮಲೆನಾಡಿನಲ್ಲಿ ಇವುಗಳು ಹೆಚ್ಚಾಗಿ ಹುಟ್ಟಿಕೊಳ್ಳುತ್ತವೆ. ಚೇರಟೆ, ಕಪ್ಪರಶೆಟ್ಟಿ, ಮಿಲಿಪೆಡಿ ಎಂದು ಕರೆಸಿಕೊಳ್ಳುವ ಇವುಗಳು ಪಾಪದ ಜಂತುಗಳು. ಕಚ್ಚಿದ ಉದಾಹರಣೆಗಳಿಲ್ಲ. ಆದರೂ ಎಮ್ಮೆ ಚೇರಟೆಯನ್ನು ನೋಡಿದ ತಕ್ಷಣ ಮೈ ಜುಂ ಅನ್ನುತ್ತದೆ. ಇವುಗಳಲ್ಲಿ ಅನೇಕ ಜಾತಿಗಳಿರುತ್ತವೆ. ಅಪಾಯಕಾರಿ ಅಲ್ಲದಿದ್ದರೂ ಕೆಲವು ಚೇರಟೆಗಳು ಕಚ್ಚಿದರೆ ಚುಚ್ಚುಮದ್ದು ತೆಗೆದುಕೊಳ್ಳಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ತಮಗೆ ಅಪಾಯ ಬಂದಿದೆ ಎಂದು ಗೊತ್ತಾದ ತಕ್ಷಣ ಚಕ್ಕುಲಿ ಆಕಾರ ತಳೆದು, ಕೆಲವಾರು ನಿಮಿಷಗಳ ಕಾಲ ತಟಸ್ಥವಾಗಿರುತ್ತವೆ. ನಂತರ ತಮ್ಮ ಪಯಣ ಮುಂದುವರಿಸುತ್ತವೆ. ಪುಟ್ಟ ಮಕ್ಕಳಂತೂ ಇವುಗಳನ್ನು ಆಟದ ವಸ್ತುವಂತೆ ಆಡಿಸುತ್ತಾರೆ.



**–ಪುಷ್ಪ ಎನ್.ಕೆ. ರಾವ್, ಎರ್ಮಾಳ್**

